# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂ ಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 60 ಇಎನ್‌ಕ್ಯೂ 2015, ದಿನಾಂಕ 23.06.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/368/2015/ಎಆರ್‌ಇ-10, ದಿನಾಂಕ 08.09.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 11.12.2017
4) ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂ ಕು, ಹಾವೇರಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 08.01.02018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, 1) ಶ್ರೀ ಚನ್ನಪಟ್ಟಣ, ಅಂದಿನ ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಶಿಗ್ಗಾಂವ, 2) ಶ್ರೀ ಎಸ್.ಎಸ್.ವಾರದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಶಿಗ್ಗಾಂವ ಮತ್ತು 3) ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ಇವರುಗಳ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

"1 ನೇ ಆಪಾದಿತ ಸರ್ಕಾರಿ ನೌಕರರಾದ ನೀವು – 1) ಶ್ರೀ ಚನ್ನಪಟ್ಟಣ, ಅಂದಿನ ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಶಿಗ್ಗಾಂವ, 2 ನೇ ಆಪಾದಿತ ಸರ್ಕಾರಿ ನೌಕರರಾದ ನೀವು 2) ಶ್ರೀ ಎಸ್.ಎಸ್.ವಾರದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಶಿಗ್ಗಾಂವ ಮತ್ತು 3 ನೇ ಆಪಾದಿತ ಸರ್ಕಾರಿ ನೌಕರರಾದ ನೀವು 3) ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ತಾವುಗಳು ಚಿಕ್ಕಬೇಂಡಗೇರಿ ಗ್ರಾಮದ ಹನುಮಂದದೇವರ ಗುಡಿಯಿಂದ ಮಸೂತಿವರೆಗೆ ಗಟಾರ ಕಾಮಗಾರಿಯಲ್ಲಿ ರೂ.4,992/-, ಸದರಿ ಗ್ರಾಮದ ಶ್ರೀ ಗದಿಗೆಪ್ಪ ಬೆನಕನಹಳ್ಳಿ ರವರ ಮನೆಯಿಂದ ಗ್ರಂಥಾಲಯದವರೆಗೆ ರೂ.4,915/-, ಸದರಿ ಗ್ರಾಮದ ಶ್ರೀ ಬಸವರಾಜ ಮಹಾಂತಣ್ಣನವರ ಮನೆಯಿಂದ ರುದ್ರಗೌಡರ ಮನೆವರೆಗೆ ರೂ.5,831/- ಮತ್ತು ಸದರಿ ಗ್ರಾಮದ ಶ್ರೀ ಕಲ್ಲಪ್ಪನ ಕೆರೆಯ ಸಿಡಿಯಿಂದ ಶ್ರೀ ದಿವಾನ್ ಪಟೇಲ್‌ರವರ ಮನೆವರೆಗೆ, ಪಕ್ಕಾ ಗಟಾರ ಕಾಮಗಾರಿಯಲ್ಲಿ ರೂ.16,376/- ಒಟ್ಟಾರೆ ರೂ.32,045/- ಗಳನ್ನು ದುರುಪಯೋಗ ಮಾಡಿರುತ್ತೀರಿ. ಸದರಿ ದುರುಪಯೋಗಕ್ಕೆ 1 ರಿಂದ 3 ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸಮನಾಗಿ ಜವಾಬ್ದಾರರಾಗಿರುತ್ತೀರಿ.

ಆದಕಾರಣ, 1, 2 ಮತ್ತು 3 ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನೀವು ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಕರ್ತವ್ಯ ಲೋಪವೆಸಗಿ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966 ರ ನಿಯಮ 3(1)(i)(ii) ಮತ್ತು (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

ಮೇಲೆ ಓದಲಾದ (2) ರಲ್ಲಿ, ಮೇಲ್ಕಂಡ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ರವರ ದಿನಾಂಕ: 06.09.2017 ರ ವರದಿಯಲ್ಲಿ ಸದರಿ 1, 2 ಮತ್ತು 3 ನೇ ಆಪಾದಿತ ನೌಕರರ ವಿರುದ್ಧ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಅವರ ವೇತನವನ್ನು ಎರಡು ಹಂತಗಳವರೆಗೆ ಸಂಚಿತ ಪರಿಣಾಮವಾಗಿ ಕಡಿಮೆ ಮಾಡುವ ಹಾಗೂ ಅವರಿಗೆ ಪಾವತಿಸಲಾಗುವ ವೇತನ ಮತ್ತು ಭತ್ಯೆಗಳಲ್ಲಿ ರೂ.10,682/- ಗಳನ್ನು ವಸೂಲಿ ಮಾಡುವ (redusing the pay by two stages in the time scale of pay with cumulative effect and also recovering financial loss of Rs.10,682/- from the salary and other allowances payable to DGO) ದಂಡನೆಯನ್ನು ವಿಧಿಸಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1. ವಿಚಾರಣಾಧಿಕಾರಿಗಳು ಅಳತೆಗಳನ್ನು ಸರಿಯಾಗಿ ತೆಗೆದುಕೊಳ್ಳದೆ ದೋಷಾರೋಪಣ ಪಟ್ಟಿಯನ್ನು ತಯಾರಿಸಿದ ಬಗ್ಗೆ ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರಿಗೆ ಹೇಳಿಕೆ ನೀಡಿದ್ದು ಒಪ್ಪಿಕೊಂಡಿರುತ್ತಾರೆ.
2. ಸದರಿ ಕಾಮಗಾರಿಗಳಲ್ಲಿ ಹಳ್ಳದ ಉಸುಕು ಮತ್ತು ಸಿಮೆಂಟ್‌ನಲ್ಲಿ ಬೂದಿ ಮಿಶ್ರಣ ಮಾಡಿರುವುದು ಕಂಡುಬಂದಿದೆ ಎಂದು ದೂರು ದಾಖಲಾಗಿರುತ್ತದೆ. ಆದರೆ ಈ ಕಟ್ಟಡ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಉಸುಕು, ಸಿಮೆಂಟ್ ಹಾಗೂ ಜಲ್ಲಿಗಳ ಗುಣಮಟ್ಟವನ್ನು ಪರೀಕ್ಷೆ ಫಲಿತಾಂಶಗಳನ್ನು ಭರವಸೆ ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇವೆ. (ವರದಿ ಲಗತ್ತಿಸಿರುತ್ತಾರೆ)
3. ಇಲಾಖಾ ತನಿಖಾಧಿಕಾರಿಗಳು ಸ್ಥಳ ಪರಿವೀಕ್ಷಣೆಗೆ ಬಂದಾಗ ನೆರೆದಿದ್ದ ಜನರಲ್ಲಿ ಒಬ್ಬರು ಸುಖಾಸುಮ್ಮನೆ ಈ ಕಾಮಗಾರಿಗಳ ಪೈಕಿ 7ಮೀ ಉದ್ದದ ಪಕ್ಕಾ ಗಟಾರ ಕಾಮಗಾರಿಯು ಸುಮಾರು 7-9 ವರ್ಷಗಳಿಂಡ ಹಳೆಯ ಕಾಮಗಾರಿ ಎಂದು ಆಪಾದಿಸಿದ್ದರು. ಆದರೆ ತನಿಖಾಧಿಕಾರಿಗಳ ಇದರ ಬಗ್ಗೆ ಗ್ರಾ.ಪಂ. ಮತ್ತು ತಾ.ಪಂ. ಗಳಲ್ಲಿ ಈ ಬಗ್ಗೆ ವಿಚಾರಣೆ ಮಾಡದೆ ದೂರನ್ನು ಗಣನೆಗೆ ತೆಗೆದುಕೊಂಡಿರುತ್ತಾರೆ.
4. ತಾಲ್ಲೂಕು ಪಂಚಾಯತಿಯಿಂದ ಕಳೆದ 15 ವರ್ಷಗಳ ಹಿಂದೆ ಚಿಕ್ಕಬೆಂಡಿಗೇರಿ ಕಲ್ಲಪ್ಪನ ಕೆರೆಯ ಸಿಡಿಯಿಂದ ದಿವಾನ್ ಪಟೇಲ್ ಮನೆಯವರೆಗೆ ಪಕ್ಕ ಗಟಾರ ನಿರ್ಮಾಣ ಮಾಡುವ ಕಾಮಗಾರಿಯನ್ನು 2011-12 ರಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇದನ್ನು ಹೊರತುಪಡಿಸಿ ಬೇರೆ ಯಾವುದೇ ಯೋಜನೆಯಡಿ ಕಾಮಗಾರಿ ಸ್ಥಳಲದಲ್ಲಿ ಕ್ರಿಯಾಯೋಜನೆಗೆ ಅನುಮತಿ ನೀಡಿರುವುದಿಲ್ಲ ಹಾಗೂ ತಾಲ್ಲೂಕು ಪಂಚಾಯತಿಯಿಂದ ಯಾವುದೇ ಆರ್ಥಿಕ ವೆಚ್ಚ ಭರಿಸಿರುವುದಿಲ್ಲವೆಂದು ದಿನಾಂಕ 10.03.2017 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು ಧೃಢೀಕರಣ ನೀಡಿದ್ದು, ವಿಚಾರಣಾ ಸಂದರ್ಭದಲ್ಲಿ ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದರೂ ಈ ವಿಷಯನ್ನು ಗಣನೆಗೆ ತೆಗೆದುಕೊಳ್ಳದೆ ಆರೋಪ ಪಟ್ಟಿಯನ್ನು ಎತ್ತಿಹಿಡಿದಿದ್ದಾರೆ.
5. ವಿಚಾರಣಾ ಸಂದರ್ಭದಲ್ಲಿ ಲೋಕಾಯುಕ್ತ ಕಛೇರಿಗೆ ದಾಖಲೆ ಸಮೇತ ತನಿಖಾಧಿಕಾರಿಗಳ ಗಮನಕ್ಕೆ ತರಲಾಗಿದ್ದರೂ ಆರೋಪಗಳು ಸಾಬೀತಾಗಿರುವುದಾಗಿ ಏಕಪಕ್ಷೀಯವಾಗಿ ನಿರ್ಣಯಿಸಿ ಸಲ್ಲಿಸಿರುವ ವರದಿಯು ನಿರಾಧಾರವಗಿದ್ದು, ಪ್ರಕರಣದಿಂದ ಆರೋಪ ಮುಕ್ತ ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಆಪಾದನೆಗಳು ಸಾಬೀತಾಗಿರುವುದಕ್ಕೆ ತನಿಖಾಧಿಕಾರಿಗಳು ಸಮಂಜಸವಾದ ಕಾರಣಗಳನ್ನು ನೀಡಿದ್ದು, ವಿಚಾರಣೆಯಿಂದ ಸಾಬೀತಾಗಿರುವ ಹಿನ್ನೆಲೆಯಲ್ಲಿ, ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಸದರಿ ನೌಕರರಿಗೆ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಅವರ ವೇತನವನ್ನು ಎರಡು ಹಂತಗಳವರೆಗೆ ಸಂಚಿತ ಪರಿಣಾಮವಾಗಿ ಕಡಿಮೆ ಮಾಡುವ ಹಾಗೂ ಅವರಿಗೆ ಪಾವತಿಸಲಾಗುವ ವೇತನ ಮತ್ತು ಭತ್ಯೆಗಳಲ್ಲಿ ರೂ.10,682/- ಗಳನ್ನು ವಸೂಲಿ ಮಾಡುವ (redusing the pay by two stages in the time scale of pay with cumulative effect and also recovering financial loss of Rs.10,682/- from the salary and other allowances payable to DGO) ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 822 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 06.04.2018</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಶಿಫಾರಸ್ಸಿನನ್ವಯ, ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಅವರ ವೇತನವನ್ನು ಎರಡು ಹಂತಗಳವರೆಗೆ ಸಂಚಿತ ಪರಿಣಾಮವಾಗಿ ಕಡಿಮೆ ಮಾಡುವ ಹಾಗೂ ಅವರಿಗೆ ಪಾವತಿಸಲಾಗುವ ವೇತನ ಮತ್ತು ಭತ್ಯೆಗಳಲ್ಲಿ ರೂ.10,682/- ಗಳನ್ನು ವಸೂಲಿ ಮಾಡುವ (redusing the pay by two stages in the time scale of pay with cumulative effect and also recovering financial loss of Rs.10,682/- from the salary and other allowances payable to DGO) ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಹಾವೇರಿ ಜಿಲ್ಲಾ ಪಂಚಾಯತಿ, ಹಾವೇರಿ.
6) ಕಾರ್ಯನಿರ್ವಾಹಕ ಅಧಿಕಾರಿ, ಶಿಗ್ಗಾಂವ ಅಂಕೋಲ ತಾಲ್ಲೂಕು ಪಂಚಾಯತಿ, ಶಿಗ್ಗಾಂವ, ಹಾವೇರಿ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ ನೃಪತಿ ಭೂಸರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಂಡಗೇರಿ ಗ್ರಾಮ ಪಂಚಾಯತಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.